# ಆನಂದನ ಕಥೆ

ಬುದ್ಧನ ಮುಖ್ಯ ಶಿಷ್ಯನೆಂದರೆ ಆನಂದ. ಅವನು ಬುದ್ಧನ ಕೊನೆಗಾಲದವರಗೂ ಜೊತೆಯಲ್ಲಿದ್ದವನು. ಅವನನ್ನು ಬಿಟ್ಟರೆ ಎರಡನೇ ಹೆಸರು ದೇವದತ್ತ. ಇವರಿಬ್ಬರೂ ಬುದ್ಧನ ಸಂಬಂಧಿಗಳೇ. ದೇವದತ್ತ ಚಿಕ್ಕ ವಯಸ್ಸಿನಿಂದಲೂ ಬುದ್ಧನ ಜೊತೆಯಲ್ಲೇ ಬೆಳೆದರೂ ಅವನ ಬಗೆಗಿನ ಮಾತ್ಸರ್ಯದಿಂದಲೇ ಗುರುತಿಸಲ್ಪಡುತ್ತಾನೆ. ಬುದ್ಧನ ಬೆಳದಿಂಗಳ ಕತೆಯಲ್ಲಿ ಅವನೊಂದು ಕಪ್ಪುಚುಕ್ಕೆಯಾಗಿಯೇ ಉಳಿದಿದ್ದಾನೆ.

ಶುದ್ಧೋದನನ ತಮ್ಮ ಅಮಿತೋದನನ ಮಗ ಆನಂದ. ಬುದ್ಧ ಜ್ಞಾನೋದಯ ಪಡೆದ ನಂತರ ಆನಂದನನ್ನು ಬುದ್ಧನ ಜೊತೆಯಲ್ಲಿರಲು ಆಹ್ವಾನಿಸಲಾಗುತ್ತದೆ. ಬುದ್ಧ ಅನುಭವಿಸುವ ಸ್ವಾತಂತ್ರ್ಯ, ಜ್ಞಾನದ ಬೆಳದಿಂಗಳನ್ನು ಅನುಭವಿಸಲಾರದವರು ಬುದ್ಧನ ಶಿಷ್ಯರು ಹೇಗಾದಾರು ಎಂದೇ ಆನಂದ ತಿಳಿದಿದ್ದ. ಹೀಗಾಗಿ ಅವನ ಬಳಿ ತನ್ನ ಎಂಟು ರೀತಿಯ ಷರತ್ತುಗಳನ್ನು ಒಪ್ಪುವುದಾದರೆ ಶಿಷ್ಯನಾಗುತ್ತೇನೆ ಎನ್ನುತ್ತಾನೆ. ಆ ಷರತ್ತುಗಳೆಂದರೆ ಬುದ್ಧ ಅವನು ತೊಡುವ ವಸ್ತ್ರಗಳನ್ನು ತನಗೆ ನೀಡುವಂತಿಲ್ಲ. ಅವನು ಸ್ವೀಕರಿಸಿದ ಆಹಾರವನ್ನು ತನಗೆ ನೀಡುವಂತಿಲ್ಲ. ಅವನು ವಾಸಿಸುವೆಡೆ ತಾನು ವಾಸಿಸುವುದಿಲ್ಲ. ಅವನು ಆಹ್ವಾನಿತನಾಗಿ ಹೋಗುವೆಡೆಯಲೆಲ್ಲ ತನ್ನನ್ನು ಕರೆದೊಯ್ಯುವಂತಿಲ್ಲ. ಈ ನಾಲ್ಕೂ ಷರತ್ತುಗಳನ್ನು ತನ್ನ ಸ್ವಾತಂತ್ರ್ಯಕ್ಕಾಗಿ ಕೇಳುತ್ತಾನೆ. ಮುಂದುವರೆದು ತಾನು ಕರೆದೆಡೆಯಲ್ಲೆಲ್ಲಾ ಬುದ್ಧ ಬರಬೇಕು. ಬುದ್ಧನನ್ನು ನೋಡಲೆಂದು ದೂರದಿಂದ ಬಂದವರನ್ನು ತಾನು ಮಾತನಾಡಿಸುವಂತಿರಬೇಕು. ತನಗೆ ಅನುಮಾನ ಬಂದಾಗಲೆಲ್ಲಾ ಅವನೊಂದಿಗೆ ಮಾತನಾಡಲು ಅನುಮತಿಯಿರಬೇಕು. ಬುದ್ಧನ ಅನುಪಸ್ಥಿತಿಯಲ್ಲಿ ಅವನ ವಿಚಾರಗಳನ್ನು ಮತ್ತೆ ಜನರೆದುರು ಹಂಚಿಕೊಳ್ಳಲು ಅನುಮತಿಯಿರಬೇಕು. ಈ ನಾಲ್ಕು ಷರತ್ತುಗಳನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತಾನೆ. ಸ್ವಾತಂತ್ರ್ಯ, ಸಮಾನತೆಯನ್ನು ಕೇಳುವ ಈ ಬೇಡಿಕೆಗಳನ್ನು ಬುದ್ಧ ಒಪ್ಪಿಕೊಂಡ ನಂತರವೇ ಆನಂದ ಶಿಷ್ಯನಾದದ್ದು.

ಆನಂದ ಕೊನೆಗಾಲದವರೆಗೂ ಬುದ್ಧನನ್ನು ನೆರಳಾಗಿಯೇ ಹಿಂಬಾಲಿಸಿದವನು. ಒಬ್ಬ ನಿಷ್ಠಾವಂತ ಅನುಯಾಯಿಯಾಗಿ, ಕಾರ್ಯದರ್ಶಿಯಾಗಿ, ತಾಯಿಯಂತೆ ಬುದ್ಧನ ಬೇಕು ಬೇಡಗಳನ್ನು ನೋಡಿಕೊಂಡವನು. ಅವನು ಎಂದೂ ತನ್ನ ಕರ್ತವ್ಯಗಳನ್ನು ಮರೆಯಲಿಲ್ಲ. ಬುದ್ಧ ಸಾರ್ವಜನಿಕರ ಜೊತೆ ನಡೆಸಿದ ತನ್ನ ಚರ್ಚೆಯಲ್ಲಿ ಬಹುತೇಕ ಆನಂದನನ್ನು ಉಲ್ಲೇಖಿಸುವುದರ ಮೂಲಕವೇ ಆರಂಭಿಸುತ್ತಾನೆ. ಈ ಇಬ್ಬರೂ ಗುರು ಶಿಷ್ಯರ ಸಂಬಂಧ ಚರಿತ್ರೆಯಲ್ಲಿಯೇ ಅಪರೂಪವಾದದ್ದು. ಬುದ್ಧನ ಅಂತಿಮ ಗಳಿಗೆಯವರೆಗೂ ಜೊತೆಯಲ್ಲಿದ್ದ ಆನಂದ 120 ವರ್ಷಗಳ ಕಾಲ ಬದುಕಿದ್ದ. ತನ್ನ ಕೊನೆಯುಸಿರು ಎಳೆಯುವಾಗ 'ನನ್ನ ಗುರುವಿಗೆ ನನ್ನೆಲ್ಲಾ ಪ್ರೀತಿ ಮತ್ತು ವಿಶ್ವಾಸವನ್ನು ಸಮರ್ಪಿಸಿದೆ, ಅವನು ಹೇಳಿದ ಕರ್ತವ್ಯಗಳನ್ನು ನಡೆಸಿಕೊಟ್ಟೆ, ಅವನು ಹೊರೆಸಿದ ಭಾರವನ್ನೆಲ್ಲಾ ಇಳಿಸಿ ಹಗುರಾದೆ, ನನಗೆ ಮರಳಿ ಹುಟ್ಟುವ ಕನಸುಗಳಿಲ್ಲ' ಎನ್ನುವ ಧನ್ಯತೆಯ ಮಾತುಗಳನ್ನಾಡುತ್ತಾನೆ.

ಬುದ್ಧನ ಶಿಷ್ಯರಲ್ಲೆಲ್ಲಾ ಜನಪ್ರೀತಿಗಳಿಸಿದ್ದವನೆಂದರೆ ಆನಂದ ಮಾತ್ರ. ಹೆಸರಿಗೆ ತಕ್ಕಂತೆ ಜನ ಅವನನ್ನು ಪ್ರೀತಿಸಿದರು, ಆರಾಧಿಸಿದರು. ನೋಡಲು ಅಂದವಾಗಿದ್ದ, ತನ್ನ ಸಿಹಿಯಾದ ಧ್ವನಿಯಿಂದ ಜನರ ಮನಸ್ಸನ್ನು ಗೆಲ್ಲುತ್ತಿದ್ದ, ನೊಂದವರ ಮನಸ್ಸಿಗೆ ನೆಮ್ಮದಿ ನೀಡುತ್ತಿದ್ದ, ಸ್ಫೂರ್ತಿ ತುಂಬುತ್ತಿದ್ದ ಅವನಿಗೆ ಬಹಳಷ್ಟು ಬುದ್ಧನ ಶಿಷ್ಯೆಯರು ಮಾರುಹೋಗಿದ್ದರು. ಆದರೆ ಮಾಗುವಿಕೆಯ ಹಾದಿಯಲ್ಲಿದ್ದ ಆನಂದ ಚಿತ್ತಚಾಂಚಲ್ಯಗಳಿಂದ ಬಹುದೂರ ಉಳಿದಿದ್ದ.

ಒಂದು ದಿನ ಬುದ್ಧ ಜೆತವನದಲ್ಲಿ ತಂಗಿದ್ದಾಗ ಆನಂದ ಭಿಕ್ಷಾಟನೆಗಾಗಿ ಸಮೀಪದ ನಗರಕ್ಕೆ ಹೋಗುತ್ತಾನೆ. ನೀರು ಕುಡಿಯಲು ನದಿಗೆ ಹೋದಾಗ ಅಲ್ಲಿ ಹುಡುಗಿಯೊಬ್ಬಳು ಮಡಕೆಯಲ್ಲಿ ನೀರು ತುಂಬುತ್ತಿರುತ್ತಾಳೆ. ಆನಂದ ಕುಡಿಯುವ ನೀರು ಕೇಳಿದಾಗ ಆ ಹುಡುಗಿ ತಾನೊಬ್ಬ ಚಾಂಡಾಲ ಕನ್ಯೆಯೆಂದು ನೀರು ಕೊಡಲು ನಿರಾಕರಿಸುತ್ತಾಳೆ. ಆನಂದ ತನಗೆ ಜಾತಿ ಮುಖ್ಯವಲ್ಲ, ನೀರು ಮುಖ್ಯ ಎಂದು ನೀರು ಕುಡಿದು ತೆರಳುತ್ತಾನೆ. ಅವನೇನೋ ತೆರಳಿದ. ಆದರೆ ಅವನ ನಡೆನುಡಿ ಚೆಲುವಿಗೆ ಮರುಳಾದ ಪ್ರಕೃತಿಯೆಂಬ ಆ ಹುಡುಗಿಗೆ ಅವನನ್ನು ಬಿಟ್ಟುಕೊಡಲು ಸಾಧ್ಯವಾಗುತ್ತಿಲ್ಲ. 'ಕುಡಿಯಲು ನೀರನ್ನು ಕೊಡುವೆಯಾ' ಎಂಬ ಮಾತು ಬಿಡದೆ ಅವಳನ್ನು ಕಾಡಲಾರಂಬಿಸುತ್ತದೆ.

ಮನೆಗೆ ಹಿಂದಿರುಗಿದ ಆ ಹುಡುಗಿ ತಾಯಿಯ ಬಳಿ ನಡೆದ ಘಟನೆಯನ್ನು ತಿಳಿಸಿ ಹೇಗಾದರೂ ಸರಿ ನನಗೆ ಆನಂದನನ್ನು ಕೊಡಿಸು ಎಂದು ಗೋಗರೆಯಲಾರಂಭಿಸುತ್ತಾಳೆ. ಅವಳ ತಾಯಿ ಮಾತಂಗಿ ಮಂತ್ರ, ತಂತ್ರ ವಿದ್ಯೆ ಕಲಿತವಳು. ಬುದ್ಧನ ಶಿಷ್ಯನಾದ ಅವನನ್ನು ವಶಪಡಿಸಿಕೊಳ್ಳುವುದು ಕಷ್ಟವೆಂದು ಗೊತ್ತಿದ್ದರೂ ಮಗಳ ಒತ್ತಾಯಕ್ಕೆ ಮಣಿದು ಆ ಪ್ರಯತ್ನಕ್ಕೆ ಹಾಕುತ್ತಾಳೆ. ತಂತ್ರದ ಶಕ್ತಿಯಿಂದ ಅವನನ್ನು ಮನೆಗೆ ಬರುವಂತೆ ಮಾಡಿ ಮಂತ್ರ ಪ್ರಯೋಗಿಸುತ್ತಾಳೆ. ಬುದ್ಧನ ಸ್ಮರಣೆ ಮಾತ್ರದಿಂದಲೇ ಆ ವ್ಯೂಹದಿಂದ ಹೊರಬಂದ ಆನಂದ ಮರಳಿ ಬುದ್ಧನನ್ನು ಸೇರುತ್ತಾನೆ. ಅವನ ಮೋಹಕ್ಕೆ ಒಳಗಾದ ಪ್ರಕೃತಿಗೆ ನಿರಾಸೆಯಾಗುತ್ತದೆ.

ಮತ್ತೆ ಮರುದಿನ ಆನಂದ ಹೋದ ಕಡೆಯೆಲ್ಲಾ ಹಿಂಬಾಲಿಸುತ್ತಾ ಬುದ್ಧ ತಂಗಿದ್ದ ಜೆತವನಕ್ಕೆ ಬಂದ ಪ್ರಕೃತಿ ಬುದ್ಧನ ಬಳಿ ಆನಂದನಿಗಾಗಿ ಬೇಡುತ್ತಾಳೆ. ಬುದ್ಧ 'ನಿನಗೇನು ಬೇಕಿದೆ? ಅವನ ಶರೀರದ ಯಾವ ಭಾಗ ನಿನಗೆ ಖುಷಿ ಕೊಡುತ್ತದೆ' ಎಂದು ಪ್ರಶ್ನಿಸುತ್ತಾನೆ. ಅವಳು ಆನಂದನ ಕಣ್ಣು, ಕಿವಿ, ಮೂಗು, ಧ್ವನಿ, ನಡಿಗೆ... ಹೀಗೆ ಪಟ್ಟಿ ಕೊಡುತ್ತಾ ಹೋಗುತ್ತಾಳೆ. ಬುದ್ಧ ಶರೀರದ ಈ ಎಲ್ಲಾ ಭಾಗಾದಿಗಳು ಕೇವಲ ಮಲಮೂತ್ರಗಳ ತೊಟ್ಟಿ. ಸ್ತ್ರೀ, ಪುರುಷರ ಸಮಾಗಮದಿಂದ ಮಕ್ಕಳು ಜನಿಸುತ್ತಾರೆ ನಿಜ. ಎಲ್ಲಿ ಜನನವಿದೆಯೋ ಅಲ್ಲಿಯೇ ಮರಣದ ಸಂಕಟವಿದೆ ಎಂಬ ನಿತ್ಯ ಸತ್ಯವನ್ನು ಅರ್ಥಮಾಡಿಸಿದಾಗ ಆಕೆ ಆನಂದನ ಮೋಹದಿಂದ ವಿಮುಖಳಾದಳು. ಆದರೆ ಮರಳಿ ಹೊರಲೋಕಕ್ಕೆ ಹೋಗಲು ಇಚ್ಛಿಸದೆ ಭಿಕ್ಷುಣಿಯಾಗಿ ಬುದ್ಧನ ಸಂಘದಲ್ಲಿಯೇ ತನ್ನ ನೆಲೆ ಕಂಡುಕೊಂಡಳು. ಹೀಗೆ ಆನಂದನ ಮೋಹದಿಂದಾಗಿ ಕೆಳವರ್ಗಕ್ಕೆ ಸೇರಿದ ಹೆಣ್ಣು ಮಗಳಾದ ಪ್ರಕೃತಿ ಬೌದ್ಧ ಸಂಘಕ್ಕೆ ಸೇರಿದ ಅಪರೂಪದ ಕತೆಯೊಂದು ಚರಿತ್ರೆಯಲ್ಲಿ ಉಳಿದುಹೋಗಿದೆ.

■ ಅಮೃತಮತಿ

